**26 ನೇ ಅಪರ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ (ಸಿಸಿಹೆಚ್-20)**

**ಎಸ್.ಸಿ.ನಂ.1099/2019**

ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕಃ 20-01-2025

| | |
|---|---|
| ಸಾಕ್ಷಿಯ ಹೆಸರು : | ಕಾಂತಮಣಿ |
| ತಂದೆ ಹೆಸರು : | ಮುತ್ತು ಕುಮಾರ್ ಸ್ವಾಮಿ |
| ವಯಸ್ಸು : | 80 ವರ್ಷಗಳು |
| ವೃತ್ತಿ : | ಏನು ಇಲ್ಲ |
| ವಾಸ ಸ್ಥಳ : | ಭಾರತಿ ನಗರ, ಬೆಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಪಿಪಿ ರವರಿಂದಃ**

ಚಾಸಾ.18 ನನ್ನ ಮಗಳು, ಚಾಸಾ.19 ನನ್ನ ಸೊಸೆ. ಚಾಸಾ.6 ನನ್ನ ಅಳಿಯ. ಮೃತ ಸತ್ಯಶೀಲ ನನಗೆ ಮಗನಾಗ ಬೇಕು. ಈಗ್ಗೆ ಸುಮಾರು 5 ವರ್ಷಗಳ ಹಿಂದೆ ಮೂವರು ಸೇರಿ ನನ್ನ ಮಗನನ್ನು ಕೊಲೆ ಮಾಡಿರುತ್ತಾರೆ. ನನ್ನ ಮಗನನ್ನು ಯಾರೂ ಮೂರುಜನ ವ್ಯಕ್ತಿಗಳು ಸೇರಿ ಸಿಗರೇಟ್ ಪಾಕ್ಟರಿ ಹತ್ತಿರ ನನ್ನ ಮಗನನ್ನು ಕೊಲೆ ಮಾಡಿರುತ್ತಾರೆ. ಮಾರನೆಯ ದಿನ ಬೆಳಗ್ಗೆ 6.00 ಗಂಟೆಗೆ ಪುಲಿಕೇಶಿ ನಗರ ಪೋಲಿಸರು ನಮ್ಮ ಮನೆಯ ಬಳಿ ಬಂದು ನನಗೆ ಹಾಗೂ ಚಾಸಾ.18 ರವರಿಗೆ ನನ್ನ ಮಗ ಕೊಲೆಯಾಗಿರುವ ವಿಷಯ ತಿಳಿಸಿದ್ದರು. ಪೋಲಿಸರು ಆ ಮೂವರು ವ್ಯಕ್ತಿಗಳು ನನ್ನ ಮಗನನ್ನು ರಾತ್ರಿ 11.00 ಗಂಟೆ ಸುಮಾರಿಗೆ ಕೊಲೆಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾನು ಪೋಲಿಸ್ ಠಾಣೆ ಗೆ ಹೋಗಿ ಈ ಕುರಿತು ನಾನು ದೂರನ್ನು ನೀಡಿರುತ್ತೇನೆ. ಸಾಕ್ಷಿ ತಾವು ನೀಡಿದ ದೂರನ್ನು ಗುರುತಿದ್ದು, ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದೆ. ಅದರಲ್ಲಿರುವ ತಮ್ಮ ಹೆಬ್ಬೆಟ್ಟು ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನನ್ನ ಮಗನನ್ನು ಮೂರುಜನ ವ್ಯಕ್ತಿಗಳು ಸೇರಿ ಕೊಲೆ ಮಾಡಿರುತ್ತಾರೆ ಎಂದು ಗೊತ್ತಾಗಿತು. ಆದರೆ ಅವರ ಹೆಸರು ನನಗೆ ನೆನಪಿರುವುದಿಲ್ಲ. ಆ ಮೂರು ಜನ ವ್ಯಕ್ತಿಗಳನ್ನು ಪೋಲಿಸರು ನನಗೆ ತೋರಿಸಿರುತ್ತಾರೆ.

ಆ ಮೂರು ಜನ ವ್ಯಕ್ತಿಗಳುನ್ನು ಮತ್ತೆ ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮಂದೆ ಹಾಜರು ಇರುವ 1 ಮತ್ತು 3 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿ ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರು ಇದ್ದು, ಆತನನ್ನು ಗುರುತಿಸುವ ಬಗ್ಗೆ ತಕಾರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ವಿ ಬಿ ವಕೀಲರಿಂದ.**

ನನ್ನ ಮಗ ತೀರಿಕೊಂಡಾಗ ನಾನು ಪೋಲಿಸರಿಗೆ ದೂರನ್ನು ಕೊಟ್ಟಿರುತ್ತೇನೆ. ದೂರನ್ನು ಬರೆಯಲು ನಾನು, ನನ್ನ ಅಳಿಯ ಹಾಗೂ ನನ್ನ ಮಗಳು ಹೇಳಿರುತ್ತಾರೆ. ನಾನು ದೂರು ಕೊಟ್ಟ ಮಾರನೆಯ ದಿನ ಪೋಲಿಸರು ನನಗೆ ಆರೋಪಿತರನ್ನು ತೋರಿಸಿರುತ್ತಾರೆ. ನನಗೆ ಆರೋಪಿತರನ್ನು ಆ ದಿನ ಪೋಲಿಸರು ನನಗೆ ಠಾಣೆಯಲ್ಲಿ ತೋರಿಸಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ

**26 ನೇ ಅ.ನ.ಸಿ.ಸೆ. ನ್ಯಾಯಾಧೀಶರು,**
**ಬೆಂಗಳೂರು.**